**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 144 /2019**

ಪಿಡಬ್ಲ್ಯೂ: 1

ಸಿಡಬ್ಲ್ಯೂ: 1

ಹೆಸರು : ಅಣ್ಣಪ್ಪ ತಂದೆ: ಮಲ್ಲಪ್ಪ ಕಾಳ

ವಯಸ್ಸು : 42 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಬ್ಯಾಡಗಿ

ದಿನಾಂಕ : 22-03-2021 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ನಾನು ಸುಮಾರು 15 ವರ್ಷಗಳಿಂದ ಬ್ಯಾಡಗಿ ಶಹರದ ರಟ್ಟೀಹಳ್ಳಿ ರಸ್ತೆಯ ಶ್ರೀ ಬೀರೇಶ್ವರ ದೇವಸ್ಥಾನದ ಎದುರಿಗೆ ಓಂ ಕಮ್ಯೂನಿಕೇಷನ್ ಎನ್ನುವ ಹೆಸರಿನ ಮೊಬೈಲ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ಸದರಿ ಅಂಗಡಿಯನ್ನು ನಾನು ಮತ್ತು ಚಾಸಾ-5 ರವರು ನಡೆಸಿಕೊಂಡು ಬರುತ್ತೀದ್ದೆವೆ. ದಿಃ 18-12-2018 ರಂದು ರಾತ್ರಿ 09-30 ಗಂಟೆಗೆ ನಾನು ಮತ್ತು ಚಾಸಾ-5 ರವರು ಕೂಡಿಕೊಂಡು ನಮ್ಮ ಮೊಬೈಲ್ ಅಂಗಡಿಯನ್ನು ಬಂದು ಮಾಡಿಕೊಂಡು ಅಂಗಡಿಯ ಶೆಟರ್ ಗಳನ್ನು ಎಳೆದುಕೊಂಡು ಕೀಲಿ ಹಾಕಿಕೊಂಡು ಮನೆಗೆ ಹೋಗಿರುತ್ತೇವೆ. ದಿಃ 19-12-2018 ರಂದು ಬೆಳಗ್ಗೆ 07-00 ಗಂಟೆ ಸುಮಾರಿಗೆ ನನ್ನ ಅಂಗಡಿಯ ಮುಂಭಾಗ ಸೆಲ್ಯೂನನ್ನು ನಡೆಸುತ್ತಿರುವ ಚಾಸಾ-2 ರವರು ನನಗೆ ಫೋನ್ ಮಾಡಿ ನಿಮ್ಮ ಅಂಗಡಿಯ ಶೆಟರ್ ಸ್ವಲ್ಪ ಮೇಲೆ ಬಂದಿದೆ ಬಂದು ನೋಡಿ ಎಂದು ನನಗೆ ಹೇಳಿದ್ದು, ನಂತರ ಸದರಿ ವಿಷಯವನ್ನು ನಾನು ನನ್ನ ಅಣ್ಣನಿಗೆ ತಿಳಿಸಿ ಕೂಡಲೇ ನಮ್ಮ ಅಂಗಡಿಗೆ ಬಂದೆವು. ಹಾಗೆ ಬಂದು ಅಂಗಡಿಯನ್ನು ನೋಡಿದ ಕೂಡಲೇ ಯಾರೋ ಕಳ್ಳರು ಯಾವುದೋ ಆಯುಧದಿಂದ ಶೆಟರ್ ಅನ್ನು ಮುರಿದಿದ್ದು, ಬೀಗವನ್ನು ಕೂಡ ಮುರಿದಿದ್ದು ಕಂಡು ಬಂತು. ನಂತರ ಅಲ್ಲಿಯೇ ಪಕ್ಕದಲ್ಲಿ ಎರಡು ಕಬ್ಬಿಣದ ರಾಡ ಮತ್ತು ಒಂದು ಸ್ಕ್ರೂ ಡ್ರೈವರ್ ಬಿದ್ದಿದ್ದವು. ನಂತರ ನನ್ನ ಅಣ್ಣ ಚಾಸಾ-5 ರವರು ಪೋಲೀಸರಿಗೆ ವಿಷಯ ಮುಟ್ಟಿಸಿದ್ದು ಅವರ ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತಾರೆ. ಹಾಗೆ ಪೋಲೀಸರು ಅಲ್ಲಿಗೆ ಬಂದ ನಂತರ ಅಂಗಡಿಯ ಒಳಗೆ ಹೋಗಿ ನೋಡಲಾಗಿ Rack ನಲಿಟ್ಟಿದ್ದ ಹೊಸ ಮೊಬೈಲ್ ಫೋನಗಳು ಕಾಣಿಸಿಲಿಲ್ಲ. ನಮ್ಮ ಅಂಗಡಿಯಲ್ಲಿ ಯಾರೋ ಕಳ್ಳರು ದಿಃ 18.12.2018 ರ ರಾತ್ರಿ 09-30 ರ ದಿಃ 19-12-2018 ರಬೆಳಗ್ಗೆ 07-00 ಗಂಟೆಯ ನಡುವಿನ ಅವಧಿಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ಖಚಿತವಾಯಿತು. ನಂತರ ಸ್ಯಾಮಸಂಗ, ಲಾವಾ, ನೋಕಿಯ, ಎಂ. ಐ., ಟೆಕ್ನೋ ಕೆಮನ್ ನ ಒಟ್ಟು 32 ಮೊಬೈಲ್ ಫೋನಗಳು ಕಳುವು ಆಗಿರುವ ಬಗ್ಗೆ ತಿಳಿದುಬಂದಿರುತ್ತದೆ. ಇವುಗಳ ಅಂದಾಜು ಕಿಮ್ಮತ್ತು ಒಂದು ಲಕ್ಷದ ಅರವತ್ತೈದು ಸಾವಿರದ ಆರು ನೂರಾ ನಾಲ್ಕು ರೂಪಾಯಿ ಆಗಿರುತ್ತದೆ.

ನ್ಯಾಯಾಲಯದ ಕಲಾಪದ ಅವಧಿ ಮುಕ್ತಾಯವಾಗಿದ್ದರಿಂದ, ಮಧ್ಯಾಹ್ನ 03-00 ಗಂಟೆಗೆ ಮೂಂದೂಡಲಾಯಿತು.

ನ್ಯಾಯಾಲಯದ ಕಲಾಪದ ಅವಧಿ ಆರಂಭವಾದ್ದರಿಂದ, ಮಧ್ಯಾಹ್ನ 03–00 ಗಂಟೆಗೆ ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ನನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ನಾನು ಪೋಲೀಸರಿಗೆ ನೀಡಿದ ಗಣಕೀಕೃತ ದೂರಿನಲ್ಲಿ ವಿವರವಾಗಿ ನಮೂದಿಸಿರುತ್ತೇನೆ. ಸಾಕ್ಷಿ ಸದರಿ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ದಿನಾಂಕಃ 20–12–2018 ರಂದು ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡು ನಂತರ ಘಟನಾ ಸ್ಥಳಕ್ಕೆ ಬಂದು ಚಾಸಾ–2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 03–30 ರಿಂದ 04–30 ರವರೆಗೆ ಪಂಚನಾಮೆಯನ್ನು ಜರುಗಿಸಿದ್ದು, ಸದರಿ ಪಂಚನಾಮೆಯನ್ನು ನನ್ನ ಮಾಹಿತಿಯಂತೆ ತಯಾರಿಸಿದ್ದು, ಆರೋಪಿತರುಗಳು ಕಳ್ಳತನ ಮಾಡಲು ಉಪಯೋಗಿಸಿದ ಎರಡು ಕಬ್ಬಿಣದ ರಾಡುಗಳು ಸ್ಕ್ರೂ ಮತ್ತು ನನ್ನ ಅಂಗಡಿಯ ಕೀಲಿಯನ್ನು ಮುರಿದು ಅಲ್ಲಿಯೇ ಬಿಟ್ಟು ಹೋಗಿದ್ದು, ಅದನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಅಪರಾಧ ಜಾಗೆಯ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಪರಾಧ ಜಾಗೆಯ ಪಂಚನಾಮೆಯನ್ನು ನಿಪಿ–2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಿಪಿ–2 ನ್ನು ತಯಾರಿಸುವ ಕಾಲಕ್ಕೆ ಅಪರಾಧಿಗಳು ಕೃತ್ಯಕ್ಕೆ ಬಳಸಿದ ಆಯುಧಗಳಾದ ಎರಡು ಕಬ್ಬಿಣದ ರಾಡುಗಳು ಮತ್ತು ಕೀಲಿಯನ್ನು ಮತ್ತು ಸ್ಕ್ರೂ ಅವುಗಳನ್ನು ಒಟ್ಟಾಗಿ ಮು.ಮಾ–1 ಎಂದು ಗುರುತಿಸಲಾಯಿತು. ನಿಪಿ–2 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಸ್ಥಳದ ಕಚ್ಚಾನಕಾಶೆಯನ್ನು ತಯಾರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಸದರಿ ಕಚ್ಚಾನಕಾಶೆಯನ್ನು ನಿಪಿ–3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ–2 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಒಟ್ಟು 06 ಭಾವಚಿತ್ರಗಳನ್ನು ತೆಗೆದಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ನಿಪಿ–4 ರಿಂದ ನಿಪಿ–9 ಎಂದು ಗುರುತಿಸಲಾಯಿತು. ದಿಃ 28–12–2018 ರಂದು ಪೋಲೀಸರು ನನ್ನನ್ನು ಪೋಲೀಸ್ ಠಾಣೆಗೆ ಕರೆದು ಕೆಲವೊಂದು ಮೊಬೈಲಗಳನ್ನು ತೋರಿಸಿ ಇವುಗಳು ನಿಮಗೆ ಸೇರಿದ್ದಾ ಎಂದು ನನ್ನಲ್ಲಿ ಕೇಳಿದ್ದು, ಅವುಗಳನ್ನು ಪರಿಶೀಲಿಸಿ ನಂತರ ಅವುಗಳು

ನನಗೆ ಸೇರಿದ್ದು ಎಂದು ನಾನು ಪೋಲೀಸರಿಗೆ ತಿಳಿಸಿರುತ್ತೇನೆ. ಆ ಸಮಯದಲ್ಲಿ ಇಬ್ಬರು ಆರೋಪಿತರುಗಳು ಪೋಲೀಸ್ ಠಾಣೆಯಲ್ಲಿ ಹಾಜರಿದ್ದು, ಪೋಲೀಸರು ಅವರನ್ನು ತೋರಿಸಿ ಇವರೇ ಮೊಬೈಲ್ ಅಂಗಡಿಗೆ ಕನ್ನ ಹಾಕಿ ನಿಮ್ಮ ಮೊಬೈಲಗಳನ್ನು ಕದ್ದಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಂತರ ಪೋಲೀಸರು ಕಳುವು ಆದ ವಸ್ತುಗಳನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿದ್ದು, ನೀನು ಮಾನ್ಯ ನ್ಯಾಯಾಲಯದಿಂದ ಸದರಿ ಕಳುವು ಆದ ಮೊಬೈಲಗಳನ್ನು ಅರ್ಜಿ ಹಾಕಿ ಬಿಡಿಸಿಕೊಡಬೇಕು ಎಂದು, ಹೇಳಿದ್ದು ಅದರಂತೆ ನಾನು ಮಾನ್ಯ ನ್ಯಾಯಾಲಯದಿಂದ ಮೊಬೈಲಗಳನ್ನು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿ ಮುಂದುವರಿದು ನನ್ನ ಅಂಗಡಿಯಿಂದ ಕಳುವು ಆದ 32 ಮೊಬೈಲಗಳ ಪೈಕಿ ನಾಲ್ಕು ಮೊಬೈಲಗಳನ್ನು ಆರೋಪಿತರುಗಳು ಮಾರಾಟ ಮಾಡಿರುತ್ತಾರೆ. ಹಾಗೆ ಮಾರಾಟ ಮಾಡಿದ ನಾಲ್ಕು ಮೊಬೈಲಗಳನ್ನು ಪೋಲೀಸರು ಜಪ್ತುಪಡಿಸಿರುತ್ತಾರೆ. ಸಾಕ್ಷಿ ಮೂಂದುರಿದು ದೂರನ್ನು ನೀಡುವಾಗ ಒಟ್ಟು 32 ಮೊಬೈಲಗಳು ಕಳುವು ಆದ ಬಗ್ಗೆ ದೂರನು ನೀಡಿರುತ್ತೇನೆ ಆದರೆ 32 ಮೊಬೈಲಗಳು ಪೈಕಿ ಒಂದು ಮೊಬೈಲನ್ನು ಕಳುವು ಆಗುವುದಕ್ಕಿಂತ ಪೂರ್ವದಲ್ಲಿ ಮಾರಾಟ ಮಾಡಿದುದರಿಂದ ಒಟ್ಟು 31 ಮೊಬೈಲಗಳನ್ನು ಆರೋಪಿತರಿಂದ ಜಪ್ತುಪಡಿಸಿಕೊಟ್ಟಿರುತ್ತಾರೆ. ಕಳುವು ಆದ ಮೊಬೈಲಗಳನ್ನು ನ್ಯಾಯಾಲಯ ಆದೇಶದ ಮೇರೆಗೆ ಪೋಲೀಸರು ನನಗೆ ಹಿಂತಿರುಗಿಸಿದಾ ತೆಗೆದಿದ್ದು ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ಕಾಣುವ ಮೊಬೈಗಳು ನಮ್ಮ ಅಂಗಡಿಯಿಂದ ಕಳುವು ಆದ ಮೊಬೈಲಗಳು ಎಂದು ಗುರುತಿಸಿದ್ದು, ಸದರಿ 13 ಭಾವಚಿತ್ರಗಳನ್ನು ಕ್ರಮಾವಾಗಿ ನಿಪಿ-10 ರಿಂದ ನಿಪಿ–22 ಎಂದು ಗುರುತಿಸಲಾಯಿತು ಮತ್ತು ಒಂದು ಸಿಡಿಯನ್ನು ನಿಪಿ–23 ಎಂದು ಗುರುಸಲಾಯಿತು. ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯ ಮುಂದೆ ಇರುವ 1 ನೇ ಆರೋಪಿನನ್ನು ನೋಡಿ ಗುರುತಿಸಿದ್ದು, 2 ನೇ ಆರೋಪಿತನು ಗೈರು ಹಾಜರಿದ್ದು, ಆತನ ಗುರುತು ಪತ್ತೆಗೆ ಆರೋತರ ಪ ರ ವಕೀಲರು ತಕರಾರು ಇಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿತ ಪರ ವಕೀಲರಿಂದ :**

ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮೂಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/–

ಜೆಎಂಎಫ್‌ಸಿ, ಬ್ಯಾಡಗಿ.